
# ಇಸ್ಲಾಂ ಧರ್ಮ ಮತ್ತು ಶ್ರೀರಾಮಕೃಷ್ಣರು



## ಎನ್. ಗೋಪೀನಾಥ

**ಈದ್‌ಮಿಲಾದ್ ಹಬ್ಬದ ಸಂಕ್ಷಿಪ್ತ ವಿವರಣೆ ಮತ್ತು ಶ್ರೀರಾಮಕೃಷ್ಣರು ಇಸ್ಲಾಂಧರ್ಮಕ್ಕೆ ಸ್ಪಂದಿಸಿದ ರೀತಿ ಈ ಲೇಖನದ ವಿಷಯವಾಗಿದೆ. ಸ್ವಾರಸ್ಯಕರ ಘಟನೆಗಳಿಂದ ಕೂಡಿದ ಈ ಲೇಖನವನ್ನು ಬರೆದಿರುವ ಶ್ರೀಗೋಪಿನಾಥರು ಶ್ರೀರಾಮಕೃಷ್ಣ ಭಾವಧಾರೆಯಿಂದ ಪ್ರೇರಿತರಾದವರು.**

**- ೧ -**

**ಇದೇ ತಿಂಗಳು** (ಅಂದರೆ ಜೂನ್ ೨೦೦೦ನೆಯ ಇಸವಿ) ಹದಿನೈದರಂದು ಮುಸಲ್ಮಾನ್ ಬಂಧುಗಳು ಪವಿತ್ರ **'ಈದ್-ಮಿಲಾದ್'** ಹಬ್ಬವನ್ನು ಆಚರಿಸುವರು. ಮುಸ್ಲಿಂ ಪಂಚಾಂಗದ ಪ್ರಕಾರ **'ರಬೀ ಉಲ್ ಅವ್ವಲ್'** ಎಂಬ ಮೂರನೆಯ ತಿಂಗಳಿನಲ್ಲಿ ಈ ಹಬ್ಬ ಬರುತ್ತದೆ. ಈ ತಿಂಗಳ ಹನ್ನೆರಡನೆಯ ದಿನವೇ **'ಬಾರಾ ವಫಾತ್'** ಹಬ್ಬ. ಬಾರಾ ಅಂದರೆ ಹನ್ನೆರಡು. ಇದೇ ದಿನವೇ ಇಸ್ಲಾಂ ಸಂಸ್ಥಾಪಕರಾದ ಪ್ರವಾದಿ ಪೈಗಂಬರರ ಪುಣ್ಯ ತಿಥಿಯೂ ಆಗಿದೆ. ಭಾರತದಲ್ಲಿ **'ಬಾರಾ ವಫಾತ್'**ಅನ್ನು ಪೈಗಂಬರರ ಸ್ಮರಣೆಯ ದಿನವನ್ನಾಗಿ ಆಚರಿಸುವರು.

ಪ್ರವಾದಿ ಮಹಮ್ಮದರು ಕ್ರಿ.ಶ. ೫೭೦ರಲ್ಲಿ ಮೆಕ್ಕಾದಲ್ಲಿ ಜನಿಸಿದರು. ಹುಟ್ಟುವ ಸ್ವಲ್ಪ ಹೊತ್ತಿಗೆ ಮೊದಲೇ ತಂದೆಯನ್ನೂ, ಆರನೆ ವರ್ಷದಲ್ಲೇ ತಾಯಿಯನ್ನೂ ಕಳೆದುಕೊಂಡರು. ಅವರನ್ನು ಅವರ ಅಜ್ಜಿ ಮೊದಲು, ನಂತರ ಮಾವ ಅಬುತಾಲಿ ಬೆಳೆಸಿದರು. ಚಿಕ್ಕಂದಿನಿಂದಲೂ ಮಹಮ್ಮದರು ಮೃದು ಹೃದಯವುಳ್ಳವರಾಗಿದ್ದರು. ಬೆಳೆದಂತೆಲ್ಲಾ ಜನರಿಂದ ದೂರವಿರುತ್ತಾ ಪರ್ವತದ ಗುಹೆಗಳಲ್ಲಿ ಕುಳಿತು ಧ್ಯಾನ ಮಾಡುತ್ತ ಇದ್ದುಬಿಡುತ್ತಿದ್ದರು. ಸತ್ಯಸಂಧರೂ, ಪ್ರಾಮಾಣಿಕರೂ ಆಗಿದ್ದ ಪೈಗಂಬರರು ಜನರು ಅನುಸರಿಸುತ್ತಿದ್ದ ಸಾಮಾಜಿಕ ಹಾಗೂ ಧಾರ್ಮಿಕ ವಿಧಿಗಳನ್ನು ಕಂಡು ನೊಂದುಕೊಂಡರು. ವಿಗ್ರಹಾರಾಧನೆ ಬಗೆಗೆ ಪ್ರಶ್ನಿಸತೊಡಗಿದರು.

ಒಂದು ದಿನ ಗುಹೆಯಲ್ಲಿ ಧ್ಯಾನ ನಿರತರಾಗಿದ್ದಾಗ, ದೇವತೆ ಗ್ರೇಬ್ರಿಯಲ್ ಕಾಣಿಸಿಕೊಂಡು ತಮಗೆ ಉಪದೇಶ ಮಾಡಿದುದಾಗಿ ತಿಳಿದರು. ಈ ವಿಷಯವನ್ನು ಕೊರಾನಿನಲ್ಲಿ ಸ್ಪಷ್ಟಪಡಿಸಲಾಗಿದೆ. ಇಸ್ಲಾಂ ಧರ್ಮೀಯರು ಈ ಗ್ರಂಥವನ್ನು ಸ್ವರ್ಗದಲ್ಲಿದ್ದ ಗ್ರಂಥವೆಂದು ತಿಳಿಯುತ್ತಾರೆ.

ಮೆಕ್ಕಾದಲ್ಲಿ ಪೈಗಂಬರರಿಗೆ ಕೆಲವರು ಬೆಂಬಲಿಗರು ದೊರೆತರೂ ಅವರಲ್ಲಿ ಹಲವರು ಗುಲಾಮರು ಮತ್ತು ಬಡವರಿದ್ದರು. ಅವರಿಗೆಲ್ಲಾ ಪೈಗಂಬರರ ಉಪದೇಶಗಳು ಹಿಡಿಸಿದವು. ಆದರೆ ಧನಿಕರು ಮಹಮ್ಮದರು ಏನೋ ಗಲಭೆ ಎಬ್ಬಿಸುತ್ತಿದ್ದಾರೆಂದು ಭಾವಿಸಿದರು.

ಮಹಮ್ಮದರು ಏಕೇಶ್ವರವಾದವನ್ನು ಪ್ರತಿಪಾದಿಸಿದರು. ದೇವರು ಒಬ್ಬನೆ ಎಂದು ವಾದಿಸಿದರು. ಆತನನ್ನು ಸಾಮೂಹಿಕವಾಗಿ ದಿನಕ್ಕೆ ಐದು ಸಾರಿ ಪ್ರಾರ್ಥಿಸಬೇಕು. ಆತ ಕರುಣಾಶಾಲಿ ಎಂದು ಹೇಳಿದರು. ಮದ್ಯಪಾನ ಮಾಡಬೇಡಿ, ದುರಾಚಾರ, ಜೂಜು ಇವೆಲ್ಲಾ ನಿಷಿದ್ಧ; ಸ್ತ್ರೀಯರನ್ನು ಗೌರವದಿಂದ ಕಾಣಿರಿ—ಇವು ಅವರ ಉಪದೇಶಗಳು. ಅಲ್ಲಾನೇ ದೇವರು, ತಾನು 'ಮಹಮ್ಮದ್' ಅಂದರೆ ದೇವರ ದೂತ ಎಂದು ಹೇಳಿಕೊಂಡರು. ಇದು ಕೆಲವರಿಗೆ ಹಿಡಿಸಲಿಲ್ಲ. ವಿಗ್ರಹಾರಾಧನೆಯನ್ನು ಮಹಮ್ಮದರು ಒಪ್ಪಲಿಲ್ಲ. ಈ ವಿಚಾರಗಳನ್ನೊಪ್ಪದ ಸಂಪ್ರದಾಯಸ್ಥರು ಪೈಗಂಬರರನ್ನು ಬಹುವಾಗಿ ಕಾಡಿದರು. ಪ್ರಾಣಾಪಾಯವೂ ಅವರಿಗುಂಟಾಯಿತು. ಮೆಕ್ಕಾದಲ್ಲಿ ಹತ್ತು ವರ್ಷಗಳಿದ್ದ ಬಳಿಕ ಮಹಮ್ಮದರೂ ಅವರ ಅನುಯಾಯಿಗಳೂ ಅರವತ್ತು ಮೈಲಿ ದೂರದಲ್ಲಿರುವ 'ತಾಯಿಫ' ಪಟ್ಟಣಕ್ಕೆ ಬಂದು ನೆಲಸಿದರು. ಇಲ್ಲಿಯೂ ಅವರಿಗೆ ಹಲವರಿಂದ ವಿರೋಧ ಉಂಟಾಯಿತು.

ಪೈಗಂಬರರು ಮದೀನಾ ನಗರಕ್ಕೆ ಬಂದಾಗ ಅವರಿಗೆ ಭವ್ಯ ಸ್ವಾಗತ ದೊರೆಯಿತು. ಅದು ಧರ್ಮಕ್ಷೇತ್ರವಾಗಿ ಅಲ್ಲಿ ಮೊದಲ ಬಾರಿಗೆ ಅವರ ಅನುಯಾಯಿಗಳು ಅವರು ಬಯಸಿದ್ದಂತೆ ದೇವರ ಆರಾಧನೆ ಮಾಡಲು ಸಾಧ್ಯವಾಯಿತು. ಈ ಘಟನೆ ಜರುಗಿದ ಕ್ರಿ.ಶ.೬೨೨ ಅನ್ನು **'ಹಿಜಿರಾ ಶಕೆ'** ಆರಂಭವೆಂದು ಕರೆದರು.

ಮಹಮ್ಮದರ ಮೇಲೆ ವಿಶ್ವಾಸ ಬೆಳೆಸಿಕೊಂಡ ಜನ ಅವರನ್ನು ನಗರದ ಆಡಳಿತ ಮುಖ್ಯಸ್ಥನೆಂದು ನೇಮಿಸಿದರು. ದೀನಜನರ ಉದ್ಧಾರಕ್ಕೆ ಮಹಮ್ಮದರು ನಿಂತರು. ಮೆಕ್ಕಾದ ಜನರೂ ಸಹಾ ಮಹಮ್ಮದರನ್ನು ತಮ್ಮ ಧಾರ್ಮಿಕ ನಾಯಕರೆಂದು ಒಪ್ಪಿದರು.

ಕ್ರಿ.ಶ. ೬೩೨ರಲ್ಲಿ ಪೈಗಂಬರರು ದಿವಂಗತರಾದರು. ಅವರ ನಂತರ ಅಲ್ಲಾನ ದೂತನಾಗಿ ಅಬೂಬಕರ್ ಎಂಬುವರು ಬಂದರು. ಕ್ರಮೇಣ ಅರೇಬಿಯಾದ ಎಲ್ಲಾ ಭಾಗ ಇಸ್ಲಾಂ ಧರ್ಮವನ್ನು ಒಪ್ಪಿಕೊಂಡಿತು. ಓಮರ್ ಎಂಬುವನ ಕಾಲದಲ್ಲಿ ಇಸ್ಲಾಂ ಸಿರಿಯಾ, ಇರಾಕ್ ಮತ್ತು ಈಜಿಪ್ಟ್‌ಗಳಿಗೂ ವಿಸ್ತರಿಸಿತು. ಕ್ರಿ.ಶ. ೬೫೬ರಲ್ಲಿ ಮಹಮ್ಮದರ ಬಂಧು ಆಲಿ ಖಲೀಫನಾಗುವ ಸಮಯಕ್ಕೆ ಭಾರತದಲ್ಲಿ ಸಹಾ ಇಸ್ಲಾಂ ಅನುಯಾಯಿಗಳು ಕಂಡುಬಂದರು. ಇಂದು ವಿಶ್ವದಲ್ಲಿ ೯೦೦ಮಿಲಿಯದಷ್ಟು ಇಸ್ಲಾಂ ಧರ್ಮೀಯರಿದ್ದಾರೆ. ಇಸ್ಲಾಂ ಧರ್ಮವನ್ನು ಬೋಧಿಸಿದ ಪ್ರವಾದಿ

ಪೈಗಂಬರರು ತಮ್ಮ ಶುದ್ಧ ಜೀವನದಿಂದ ವಿಶ್ವಕ್ಕೆ ಬೆಳಕಾದರು. ಮಹಮ್ಮದರ ಪವಿತ್ರ ವಚನ ಸಂಗ್ರಹ **ಹದೀಸ್**.

ಈದ್ ಮಿಲಾದ್ ದಿನ ಮುಸ್ಲಿಮರು ಕೊರಾನ್ ಪಠಿಸುವರು, ವಿವಿಧ ಧಾರ್ಮಿಕ ವಿಧಿಗಳನ್ನು ಆಚರಿಸುವರು.

(ಭಾರತೀಯ ಹಬ್ಬಗಳು ಮತ್ತು ಸಂಪ್ರದಾಯಗಳು, ಲೇ. ಬೆ.ಗೋ. ರಮೇಶ್, ವಾಸನ್ ಬುಕ್ ಡಿಪ್ರೋ, ಬೆಂಗಳೂರು-೯, ೧೯೯೩, ಪು.೮೯-೯೧)

- ೨ -

ಆಧುನಿಕ ಜಗತ್ತು, ಸ್ವಾಮಿ ವಿವೇಕಾನಂದರ ಗುರುಗಳಾದ ಶ್ರೀರಾಮಕೃಷ್ಣ ಪರಮಹಂಸರನ್ನು 'ಸರ್ವಧರ್ಮ ಸಮನ್ವಯಾಚಾರ್ಯ' ರೆಂದೂ ಹಾಗೂ 'ಅವತಾರ ಪುರುಷ'ರೆಂದೂ ನಿಧಾನವಾಗಿ ಒಪ್ಪಿಕೊಳ್ಳುತ್ತಿದೆ. ಶ್ರೀರಾಮಕೃಷ್ಣರು ತಮ್ಮ ಜೀವನದಲ್ಲಿ ಮೊದಲು, ತೋರಿಕೆಗೆ ಬೇರೆ ಬೇರೆ ಎಂದು ಕಂಡುಬರುವ ಹಿಂದೂ ಧರ್ಮದ ಸಕಲ ಸಂಪ್ರದಾಯದ (ಭಕ್ತಿ, ಜ್ಞಾನ, ಯೋಗ, ತಂತ್ರ, ದ್ವೈತ, ಅದ್ವೈತವೇದಾಂತ ಇತ್ಯಾದಿ)ಸಾಧನೆಗಳನ್ನು ಮಾಡಿ, ಅವುಗಳಲ್ಲಿ ಸಫಲತೆ ಕಂಡು ಅವೆಲ್ಲವೂ ಒಬ್ಬನೆ ಭಗವಂತನನ್ನು ಹುಡುಕುತ್ತಿವೆಯೆಂದು ನಿಶ್ಚಿತವಾಗಿ ತಿಳಿದುಕೊಂಡರು. ಇಷ್ಟಕ್ಕೂ ತೃಪ್ತರಾಗದೆ, ಇತರ ಧರ್ಮಗಳಾದ ಇಸ್ಲಾಂ, ಕ್ರೈಸ್ತ ಧರ್ಮಗಳ ಸಾಧನೆಯನ್ನೂ ಮಾಡಿ, ಅವುಗಳ ವಿಷಯದಲ್ಲಿಯೂ ಕೂಡ ಮೇಲೆ ಹೇಳಿದ ನಿರ್ಧಾರವನ್ನೇ ತಳೆದು, ಕೊನೆಗೆ ಭಗವಂತನ ಆರಾಧನೆಗೆ 'ಎಷ್ಟು ಮತಗಳಿವೆಯೋ, ಅಷ್ಟು ಪಥಗಳು'ಎಂದು ಘೋಷಿಸಿದರು.

ಅವರ ಬಾಲ್ಯದಲ್ಲಿಯೇ ಕಂಡು ಬರುತ್ತಿದ್ದ, ಧಾರ್ಮಿಕ ಸಂಸ್ಕಾರಗಳು ಅಸಾಧಾರಣವಾದುವು. ಬಾಲಕ ಗದಾಧರ (ಪರಮಹಂಸರ ಬಾಲ್ಯದ ಹೆಸರು) ಒಮ್ಮೆ ತನ್ನ ತಾಯಿಯಾದ ಚಂದ್ರಮಣಿ ದೇವಿಯವರೊಂದಿಗೆ ಸೋದರಮಾವನ ಊರಾದ ಸರತಿ-ಮಾಯಾಪುರಕ್ಕೆ ಹೋದನು. ದಾರಿಯಲ್ಲಿ, ತಾಯಿ ಮಕ್ಕಳಿಬ್ಬರೂ ಪ್ರಖ್ಯಾತ ಮುಸ್ಲಿಂ ಸಂತ(ಪೀರ್)ನ ದರ್ಗಾ(ಪವಿತ್ರ




ಸರತಿ-ಮಾಯಾಪುರದಲ್ಲಿರುವ ದರ್ಗಾ

ಗೋರಿ)ವೊಂದನ್ನು ಸಂದರ್ಶಿಸಿದರು. ಅಲ್ಲಿ ಬಾಲಕ ಗದಾಧರನು ನಿಶ್ಚಲನಾಗಿ, ಭಾವಾವಸ್ಥೆಯಲ್ಲಿ, ಬಹಳ ಹೊತ್ತು ಕುಳಿತಿದ್ದನಂತೆ. (*More About Ramakrisha*, ಸ್ವಾಮಿ ಪ್ರಭಾನಂದ, ಅದ್ವೈತ ಆಶ್ರಮ, ಕಲ್ಕತ್ತ, ೧೯೯೩, ಪು.೯೩.).

ಮತ್ತೆ, ಒಂಬತ್ತನೆ ವರ್ಷದಲ್ಲಿ ಗದಾಧರನು—ನಾವು ಹೇಳುತ್ತಿರುವ ಇದೇ ಈದ್ ಮಿಲಾದ್ ಹಬ್ಬದ ಸಂದರ್ಭದಲ್ಲಿ—ಕಾಮಾರ್‌ಪುಕುರದ ಹತ್ತಿರದಲ್ಲಿ ನಡೆದ ಮುಸ್ಲಿಂ ಬಾಂಧವರ ನಮಾಜು ನಡೆಯುವ ಸ್ಥಳಕ್ಕೆ ಒಬ್ಬನೆ ಹೋಗಿ, ಅದನ್ನು ನೋಡಲು ಹತ್ತಿರವಿದ್ದ ಅರಳೀ ಮರದ ಕೆಳಗೆ ನಿಂತನು. ಆಗ ಭಾವಾವಿಷ್ಟನಾದ ಅವನಿಗೆ ಒಂದು ದರ್ಶನವಾಗಿ, ಅದೇ ಸ್ಥಿತಿಯಲ್ಲಿಯೆ, ಬಾಹ್ಯ ಪ್ರಜ್ಞೆ ಇಲ್ಲದೆ, ಸುಮಾರು ಎರಡೂವರೆ ಗಂಟೆಯಷ್ಟು ಕಾಲ ಇದ್ದನು (ಅದೇ,ಪು. ೯೩-೯೪) .

ಶ್ರೀರಾಮಕೃಷ್ಣರು ಹಿಂದೂಧರ್ಮದ ವಿವಿದ ಪಂಥಗಳ ಸಾಧನೆಯ ನಂತರ, ಇಸ್ಲಾಂ ಧರ್ಮದ ಬಗ್ಗೆ ಆಕರ್ಷಿತರಾದಾಗ ದಕ್ಷಿಣೇಶ್ವರದ ಕಾಳಿಗುಡಿಯ ಪ್ರದೇಶಕ್ಕೆ ಸೂಫಿ ಪಂಥದ ಅನುಯಾಯಿ ಗೋವಿಂದ ರಾಯ್ ಎಂಬುವರು (ಇವರ ಮುಸ್ಲಿಂ ಹೆಸರು ವಾಜಿದ್ ಅಲಿಖಾನ್ ಎಂದಿತ್ತು) ಬಂದರು. ಪರಮಹಂಸರು ಅವರಿಂದ 'ಅಲ್ಲಾ'ಮಂತ್ರ ದೀಕ್ಷೆ ಪಡೆದು, ಮೂರು ದಿನಗಳ ಸಾಧನೆಯಲ್ಲಿಯೆ ಆ ಧರ್ಮದ ಚರಮಾವಸ್ಥೆಯನ್ನು ತಲುಪಿ, ಪ್ರವಾದಿ ಮಹಮ್ಮದರ ದರ್ಶನ ಹೊಂದಿದರು. ಈ ಮೂರು ದಿನಗಳಲ್ಲಿ ಅವರು ಮುಸ್ಲಿಂ ಬಂಧುಗಳಂತೆಯೆ ಕಚ್ಚೆ ಹಾಕದೆ ಪಂಚೆಯುಟ್ಟು, ಜನಿವಾರ ತ್ಯಜಿಸಿ, ಮುಸ್ಲಿಮರ ಆಹಾರವಾದ ಪಲಾವು ಇತ್ಯಾದಿ—ಈರುಳ್ಳಿ, ಬೆಳ್ಳುಳ್ಳಿ ಬೆರೆಸಿದ—ಅಡುಗೆಯನ್ನೇ ಸೇವಿಸುತ್ತಿದ್ದರು. ತಮ್ಮ ಮನಸ್ಸಿನಿಂದ ಹಿಂದೂ ದೇವದೇವಿಯರ ಭಾವನೆಗಳನ್ನು ಸಂಪೂರ್ಣವಾಗಿ ತೊರೆದು, ತಮ್ಮ ಆರಾಧ್ಯ ದೈವವಾದ ಕಾಳಿಯ ದೇವಸ್ಥಾನಕ್ಕೂ ಒಮ್ಮೆಯೂ ಹೋಗದೆ, ದೇವಸ್ಥಾನದ ಆವರಣದಲ್ಲಿದ್ದ ಮಥುರರು ವಾಸಿಸುತ್ತಿದ್ದ ಕೊಠಡಿಯಲ್ಲೇ ಇದ್ದು, ದೇವಸ್ಥಾನದ ಪಕ್ಕದಲ್ಲಿ ಇದ್ದ ಮಸೀದಿಗೆ ಹೋಗಿ ದಿನವೂ ನಮಾಜು ಮಾಡುತ್ತಿದ್ದರಂತೆ. (ಅದೇ, ಪು.೮೭—೮೮)



ದಕ್ಷಿಣೇಶ್ವರದಲ್ಲಿರುವ ಮೊಲ್ಲಾಪುರ ಮಸೀದಿ

ಇದು ಶ್ರೀರಾಮಕೃಷ್ಣರು ವಿವಿಧ ಸಂಪ್ರದಾಯಗಳನ್ನು ಅನುಸರಿಸುತ್ತಿದ್ದಾಗ ಮತ್ತು ಬೇರೆ ಧರ್ಮಗಳ ಸಾಧನೆಯನ್ನು ಮಾಡುತ್ತಿದ್ದಾಗ ತೋರುತ್ತಿದ್ದ ಏಕಾಂತನಿಷ್ಠೆ!

ಕಲ್ಕತ್ತಾದ ಚಿತ್ತರಂಜನ ರಸ್ತೆಯಲ್ಲಿ **ಗೆರಾತಾಲ ಮಸೀದಿ** ಎಂಬ ಮಸೀದಿ ಇದೆ. ಒಂದು ದಿನ ಸಂಜೆ ಮನ್ಮಥನಾಥ ಘೋಷ್ ಎಂಬ ಭಕ್ತ (ಈತ ಪರಮಹಂಸರನ್ನು ಹಲವಾರು ಬಾರಿ ದಕ್ಷಿಣೇಶ್ವರದಲ್ಲಿ ನೋಡಿದ್ದನು) ಕಛೇರಿಯಿಂದ ಮನೆಗೆ ವಾಪ ಸಾಗುವಾಗ ಆ ರಸ್ತೆಯಲ್ಲಿ ಅದ್ಭುತವಾದ ಘಟನೆಯೊಂದನ್ನು ನೋಡಿದ. ಆಗ ಕತ್ತಲಾಗುತ್ತಿತ್ತು. ಒಬ್ಬ ಮುಸಲ್ಮಾನ ಫಕೀರ ಮಸೀದಿಯ ಮುಂದೆ ನಿಂತು 'ಬಾ ನನ್ನ ಪ್ರಾಣ ನಿಧಿಯೇ ಬಾ' ಎಂದು ಕರುಣಾಪೂರಿತ ವಾಗಿ ಕೂಗುತ್ತಿದ್ದ. ಕಣ್ಣಿನಿಂದ ಧಾರಾಕಾರವಾಗಿ ನೀರು ಹರಿದು ಕೆನ್ನೆಯ ಮೇಲೆ ಇಳಿಯುತ್ತಿತ್ತು. ಈ ಕೂಗಿನಿಂದ ವಿಸ್ಮಿತನಾದ ಮನ್ಮಥ ಒಂದು ಬದಿ ಯಲ್ಲಿ ನಿಂತು ಆತನನ್ನೇ ನೋಡುತ್ತಿದ್ದ.


ಕಲ್ಕತ್ತದಲ್ಲಿರುವ ಗೆರಾತಾಲ ಮಸೀದಿ

ಆಗ ಪರಮಹಂಸರು ಎಲ್ಲಿಂದಲೋ ಎಂಬಂತೆ, ಅಲ್ಲಿಗೆ ಬಂದರು. ಕಾಳೀಘಾಟಿನ ಗುಡಿಗೆ ರಾಮಲಾಲನೊಂದಿಗೆ ಹೋಗಿದ್ದ ಅವರು ಕುದುರೆ ಗಾಡಿಯಲ್ಲಿ ವಾಪಸು ಬರುತ್ತಿದ್ದರು. ಮನ್ಮಥ ನೋಡು ತ್ತಿದ್ದಂತೆಯೇ ಗಾಡಿಯಿಂದ ಇಳಿದ ಅವರು ಫಕೀರನಿದ್ದಲ್ಲಿಗೆ ವೇಗದಿಂದ ಬಂದು ಅವನನ್ನು ಅಪ್ಪಿಕೊಂಡರು. ಸ್ವಲ್ಪಹೊತ್ತು ಹಾಗೆಯೇ ಇದ್ದರು. ಫಕೀರ ಆ ಆಲಿಂಗನದಿಂದ ಏನು ಅನುಭವಿಸಿ ದನೋ (ಅಥವಾ ಅವನ "ಪ್ರಾಣನಿಧಿಯೆ' ಬಂದು ಅವನನ್ನು ಅಪ್ಪಿಕೊಂಡಂತೆ ಆಯಿತೋ) ಯಾರು ಬಲ್ಲರು? (ಅದೇ, ಪು.೯೫)

ಕಡೆಯದಾಗಿ, ಶ್ರೀರಾಮಕೃಷ್ಣರು ಮುಸ್ಲಿಂ ಬಂಧುವೊಬ್ಬರ ಕಷ್ಟ ತಿಳಿದು ಅದಕ್ಕೆ ಸ್ಪಂದಿಸಿದ ಘಟನೆಯ ಸೊಗಸನ್ನು ನೋಡೋಣ:

ಒಂದು ದಿನ ಭಕ್ತ ಕುಮುದ್ ಬಂಧುಸೇನ್ ಎಂಬುವರು (ಇವರು ಶ್ರೀರಾಮಕೃಷ್ಣರ ಅನೇಕ ನೇರ ಶಿಷ್ಯರನ್ನು ನೋಡಿದ್ದರು) ಬೇಲೂರು ಮಠದಿಂದ ಬಸ್ಸಿನಲ್ಲಿ ವಾಪಸು ಹೋಗುತ್ತಿದ್ದರು. ಪಕ್ಕದಲ್ಲಿ ಕುಳಿತಿದ್ದ ವ್ಯಕ್ತಿ ಅವರ ಕಡೆಗೆ ತಿರುಗಿ 'ಸ್ವಾಮಿ, ನೀವು ರಾಮಕೃಷ್ಣ ಮಠಕ್ಕೆ ಸಂಬಂಧಿಸಿದವರಾ?' ಎಂದು ಕೇಳಿದನು. 'ಹೌದು,' ಎಂದ ಸೇನರು, 'ಏಕೆ, ನನಗೇನಾದರೂ ಹೇಳುವು ದಿದೆಯೇ?' ಎಂದು ಪ್ರಶ್ನಿಸಿದರು. ಆತ ಹೇಳಿದ:

'ಬಾಲ್ಯದಲ್ಲಿ ನನ್ನ ತಂದೆಯವರಿಂದ (ಅವರು ಇತ್ತೀಚೆಗೆ ಕಾಲ ವಾದರು) ಶ್ರೀರಾಮಕೃಷ್ಣರ ಬಗ್ಗೆ ಒಂದು ಸಂಗತಿಯನ್ನು ಕೇಳಿದ್ದೆ. ಅದು ನಿಜಕ್ಕೂ ವಿಸ್ಮಯಕಾರಿಯಾಗಿದೆ. ನಾವು, ನೀವು ತಿಳಿದಂತೆ, ಮುಸ್ಲಿಮರು. ನಮ್ಮ ಮನೆ ಕಾಮಾರ್‌ಪುಕುರಕ್ಕೆ (ಪರಮಹಂಸರ ಜನ್ಮಸ್ಥಳ) ಹತ್ತಿರದಲ್ಲೇ ಇದೆ. ನಾವು ಇಲ್ಲಿ ಕಲ್ಕತ್ತಾದ ಚಾಂದನಿ ಯಲ್ಲಿ ಒಂದು ಸಣ್ಣ ಅಂಗಡಿಯನ್ನು ಇಟ್ಟುಕೊಂಡಿದ್ದೇವೆ. ಈಗ ನಾನು ನಮ್ಮ ತಂದೆಯಿಂದ ಕೇಳಿದ ಸಂಗತಿಯನ್ನು ಹೇಳುತ್ತೇನೆ:

'ಆರ್ಥಿಕವಾಗಿ ನಾವು ಮಧ್ಯಮವರ್ಗಕ್ಕೆ ಸೇರಿದ್ದೇವೆ. ಹಳ್ಳಿ ಯಲ್ಲಿ ನಮಗೆ ಒಂದು ಗುಡಿಸಲು, ಅದಕ್ಕೆ ಹೊಂದಿಕೊಂಡಂತೆ ಒಂದು ಬತ್ತದ ಕಣಜ ಇತ್ತು. ಆದರೆ ದುರಾದೃಷ್ಟದಿಂದ ನಮ್ಮ ಗುಡಿಸಲು ಮತ್ತು ಬತ್ತದ ಕಣಜ ಎರಡೂ ಬೆಂಕಿಗೆ ಆಹುತಿಯಾಗು ತ್ತಿತ್ತು. ಇದು ಒಂದಲ್ಲ, ಎರಡಲ್ಲ, ಹಲವಾರು ವರ್ಷಗಳು ಆಗಿ, ನಮಗೆ ಏನು ಮಾಡಬೇಕೆಂಬುದೇ ತಿಳಿಯದಂತಾಗಿ ನಿರಾಶರಾಗಿ ದ್ದೆವು. ಒಂದು ದಿನ ನಾನು ಈ ಪರಿಸ್ಥಿತಿಯನ್ನು, ನನ್ನ ಬ್ರಾಹ್ಮಣ ಸ್ನೇಹಿತನೊಬ್ಬನಿಗೆ ಹೇಳುತ್ತಿದ್ದಾಗ, ಶ್ರೀರಾಮಕೃಷ್ಣರು, ಜನರ ಗುಂಪಿ ನಿಂದೊಡಗೂಡಿ, ಭಗವಂತನ ಕೀರ್ತನೆಗಳನ್ನು ಹಾಡುತ್ತಾ, ನರ್ತಿಸುತ್ತಾ, ಹಳ್ಳಿಯ ರಸ್ತೆಯಲ್ಲಿ ಬರುತ್ತಿದ್ದರು. ಪರಮಹಂಸರನ್ನು ತೋರಿಸುತ್ತಾ, ಸ್ನೇಹಿತ ಹೇಳಿದ: "ಆ ಮಹಾತ್ಮರಿಂದ ರಕ್ಷಣೆ ಪಡೆ. ಈ ಸಂಕಷ್ಟಗಳಿಂದ ನಿಮ್ಮನ್ನು ಪಾರು ಮಾಡಬಲ್ಲರು." ನಾನು ರಾಮ ಕೃಷ್ಣರನ್ನು ಸಮೀಪಿಸಿ, ನಮಸ್ಕರಿಸಿದೆ. ಅವರು ಕರುಣಾಪೂರಿತರಾಗಿ ಕೇಳಿದರು: "ಏನು ಸಮಾಚಾರ, ಮಗು?" ನಾನು ಉತ್ತರಿಸಿದೆ: "ಸ್ವಾಮಿ, ನಾವು ಮಧ್ಯಮ ವರ್ಗದವರು, ಮತ್ತು ಅನೇಕ ಅವಲಂಬಿತರನ್ನು ಸಾಕಬೇಕಾಗಿದೆ. ಆದರೆ, ದುರದೃಷ್ಟದಿಂದಾಗಿ, ನಮ್ಮ ಗುಡಿಸಲು ಮತ್ತು ಬತ್ತದ ಕಣಜಗಳು ಪ್ರತಿ ವರ್ಷವೂ ಅಗ್ನಿಗಾಹುತಿಯಾಗುತ್ತಿವೆ. ನಾವು ಭಿಕಾರಿಗಳಾಗಿದ್ದೇವೆ. ನಾನು ನಿಮಗೆ ಶರಣಾಗಿದ್ದೇನೆ. ಏನಾದರೂ ದಾರಿ ತೋರಿಸಿರಿ." ಶ್ರೀರಾಮಕೃಷ್ಣರು ನಮ್ಮ ಮನೆ ಎಲ್ಲಿದೆ ಎಂದು ಕೇಳಿದರು. ನಾನು ಕೈಮಾಡಿ ತೋರಿಸುತ್ತಾ, "ಅಲ್ಲಿದೆ, ನೋಡಿ, ಬೂದಿಯ ರಾಶಿ ಇನ್ನೂ ಅಲ್ಲೇ ಇದೆ,"ಎಂದೆ. ಪರಮಹಂಸರು, ಗುಂಪಿನಲ್ಲಿದ್ದವರನ್ನು ಕಾಯಲು ಹೇಳಿ, ನನ್ನೊಂದಿಗೆ ಮನೆಯ ಹತ್ತಿರ ಬಂದರು. ನಂತರ ಸ್ವಲ್ಪ ಬೋರೆ ಹಣ್ಣುಗಳನ್ನು ತರಲು ಹೇಳಿದರು. ಆ ಹಣ್ಣುಗಳನ್ನು ತಮ್ಮ ಕೈಗೆ ತೆಗೆದುಕೊಂಡು, ನನ್ನನ್ನು ಮನೆಯ ಹಾಗೂ ಬತ್ತದ ಕಣಜದ ಪ್ರದೇಶವನ್ನು ಬರಿಗಾಲಿನಲ್ಲಿ ಪ್ರದಕ್ಷಿಣೆ ಮಾಡಲು ತಿಳಿಸಿದರು. ನಾನು ಪ್ರದಕ್ಷಿಣೆ ಹೊರಡಲು ಅವರು ನನ್ನನ್ನು ಹಿಂಬಾಲಿಸಿ, ಕೆಲವು ಅಸ್ಪಷ್ಟ ಮಂತ್ರಗಳನ್ನು ಉಚ್ಚರಿಸುತ್ತಾ, ಕೆಲವು ಬೋರೆ ಹಣ್ಣುಗಳನ್ನು ಮಧ್ಯ ಮಧ್ಯದಲ್ಲಿ ಕೆಳಗೆ ಬಿಸಾಡುತ್ತಿದ್ದರು. ಪ್ರದಕ್ಷಿಣೆ ಮುಗಿದಮೇಲೆ ನಾನು ನಿಂತೆ. ಪರಮಹಂಸರು 'ಪ್ರದಕ್ಷಿಣೆ ಆಯಿತೆ?' ಎಂದರು. ನಾನು ಹೌದೆಂದಾಗ, ಅವರು ಹೊರಟು ಭಕ್ತರ ಗುಂಪನ್ನು ಮತ್ತೆ ಸೇರಿಕೊಂಡರು. ಇದಾದ ನಂತರ ನಮ್ಮ ಗುಡಿಸಲು ಮತ್ತು ಕಣಜಗಳು ಮತ್ತೆಂದೂ ಬೆಂಕಿಯ ಆಹುತಿಗೆ ಒಳಗಾಗಲಿಲ್ಲ. ಇದಕ್ಕಾಗಿ ನಾವು ಶ್ರೀರಾಮಕೃಷ್ಣರಿಗೆ ಎಂದೆಂದೂ ಕೃತಜ್ಞರಾಗಿದ್ದೇವೆ.' (ಅದೇ, ಪು.೯೮-೧೦೦)

ಪರಮಹಂಸರು ಜನ, ಜಾತಿ, ಕುಲ, ಧರ್ಮ, ಬಡವ, ಬಲ್ಲಿದ ಇತ್ಯಾದಿ ಭೇದಗಳಾವುವನ್ನೂ ಪರಿಗಣಿಸದೆ, ಎಲ್ಲರೊಂದಿಗೂ ಬೆರೆತರು.